ಸಚಿವರುಗಳ ಆಸ್ತಿ ವಿವರ

೧೫೮. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಚಿವ ಸಂಪುಟ ವಿವಿಧ ಸಚಿವರ ಆಸ್ತಿಯ ಹಾಗೂ ಭಾದ್ಯತೆಯ ವಿವರಗಳು ಸರ್ಕಾರದ ಬಳಿಯಿದೆಯೇ ;

ಆ) ಇದ್ದಲ್ಲಿ ಪ್ರತಿ ಸಚಿವರ ವಿವರಗಳನ್ನು ಒದಗಿಸುವುದು ;

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಮತ್ತು ಆ) ಕರ್ನಾಟಕ ಲೋಕಾಯುಕ್ತ ಅಧಿನಿಯಮ ೧೯೮೪ರ ೨೨ನೇ ಕಲಂಗನುಗುಣವಾಗಿ ಸಚಿವರುಗಳು ತಮ್ಮ ಆಸ್ತಿಗಳ ಬಗ್ಗೆ ಮಾಹಿತಿಯನ್ನು ಲೋಕಾಯುಕ್ತರಿಗೆ ಸಲ್ಲಿಸಿರುತ್ತಾರೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ನಾನು ಕೇಳಿದ ಪ್ರಶ್ನೆ 'ಸಚಿವ ಸಂಪುಟದ ವಿವಿಧ ಸಚಿವರಆಸ್ತಿಯ ಹಾಗೂ ಬಾಧ್ಯತೆಯ ವಿವರಗಳು ಸರ್ಕಾರದ ಬಳಿ ಇದೆಯೇ' ಎಂದು ಅದಕ್ಕೆ ಉತ್ತರವಾಗಿ 'ಸಚಿವರುಗಳು ತಮ್ಮ ಆಸ್ತಿಗಳ ಬಗ್ಗೆ ಮಾಹಿತಿಯನ್ನು ಲೋಕಾಯುಕ್ತರಿಗೆ ಸಲ್ಲಿಸಿರುತ್ತಾರೆ ಎಂದು ಹೇಳಿದ್ದಾರೆ. ಆ ತರಹ ಹೇಳುವುದರಲ್ಲಿ ಅರ್ಥವಿದೆಯೇ? ಸರ್ಕಾರದಲ್ಲಿ ಇದೆಯೋ ಇಲ್ಲವೋ?

ಶ್ರೀ ರಾಮಕೃಷ್ಣ ಹೆಗಡೆ.—ಸರ್ಕಾರದಲ್ಲಿರಬೇಕಾದ ಪ್ರಮೇಯವಿಲ್ಲ. ಹೊಸ ಲೋಕಾಯುಕ್ತದ ಕಾಯಿದೆಯು ಪ್ರಕಾರ ಪ್ರತಿವರ್ಷ ಪ್ರತಿಯೊಬ್ಬ ಸಚಿವರು ತಮ್ಮ ಆಸ್ತಿ ಪಾಸ್ತಿಗಳ ಸಾಲಸೋಲಗಳ ಸಂಪೂರ್ಣವಾದ ಲೆಕ್ಕವನ್ನು ಲೋಕಾಯುಕ್ತಕ್ಕೆ ಕಳುಹಿಸಬೇಕಾಗುತ್ತದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಸದನದ ಸದಸ್ಯರಾಗಿ ಸಚಿವರ ಆಸ್ತಿಪಾಸ್ತಿಗಳ ವಿವರಗಳನ್ನು ಕೇಳುವುದಕ್ಕೆ ನನಗೆ ಹಕ್ಕಿಲ್ಲವೇ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸಚಿವರ ಆಸ್ತಿಪಾಸ್ತಿಗಳ ಪಟ್ಟಿಯು ಕರಡು ಲೋಕಾಯುಕ್ತರ ಮುಂದಿದೆ, ಅವರು ಕ್ರಮ ಕೈಗೊಳ್ಳಬೇಕೆನ್ನುವ ಅಭಿಪ್ರಾಯವಿದೆಯೆ?

ಶ್ರೀ ರಾಮಕೃಷ್ಣ ಹೆಗಡೆ.—ಹಿಂದಿನ ಸಲ ಈ ಪ್ರಶ್ನೆ ಇಲ್ಲಿ ಬಂದಾಗ ಕೆಲವು ಸಚಿವರು ಇನ್ನೂ ಆಸ್ತಿಯ ಲೆಕ್ಕವನ್ನು ಕೊಟ್ಟಿರಲಿಲ್ಲ. ನಾನು ಈ ಬಗ್ಗೆ ಸಚಿವರಿಗೆ ಪತ್ರ ಬರೆದು ನೆನಪು ಮಾಡಿದ ಮೇಲೆ ಅಷ್ಟು ಸಚಿವರು ಇವತ್ತು ತಮ್ಮ ಆಸ್ತಿಪಾಸ್ತಿಗಳ ಲೆಕ್ಕವನ್ನು ಕೊಟ್ಟಿದ್ದಾರೆ,

ಅಧ್ಯಕ್ಷರು.—ಮಾನ್ಯ ಶ್ರೀ ಬಸವಲಿಂಗಪ್ಪನವರು, ಹಾಗೂ ಶ್ರೀ ವೀರಯ್ಯಸ್ವಾಮಿಯವರು ಬಂದಿಲ್ಲ. ಈಗ ಮುಂದಿನ ಪ್ರಶ್ನೆ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ : ಖಿಟಿಟ (೧೧೯೭)

ಅಧ್ಯಕ್ಷರು.—ಈ ಪ್ರಶ್ನೆಗೆ ಸಮಯ ಬೇಕು ಎಂದು ಕೇಳಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇದಕ್ಕೆ ಸಮಯ ಬೇಕು ಎಂದರೆ ಹೇಗೆ?

ಶ್ರೀ ರಾಮಕೃಷ್ಣ ಹೆಗಡೆ.—ಇಡೀ ರಾಜ್ಯದ ವಿವರಗಳನ್ನು ಕೇಳಿದ್ದಾರೆ. ಇದಕ್ಕೆ ಕಾಲಾವಕಾಶ ಕಾಗುತ್ತದೆ.

ವೈದ್ಯಾಧಿಕಾರಿಯನ್ನು ಅಮಾನತ್ತಿನಲ್ಲಿಟ್ಟಿರುವುದು

೧೫೦೮. ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಆರೋಗ್ಯ ಇಲಾಖೆಯಲ್ಲಿ ಅಮಾನತ್ತಿನಲ್ಲಿಡಲಾದ ಗಜೆಟೆಡ್ ಹುದ್ದೆಯ ಅಧಿಕಾರಿಗಳ ಸಂಖ್ಯೆ ಎಷ್ಟು? ಆ ಪೈಕಿ ಆರು ತಿಂಗಳಿಗಿಂತ ಹೆಚ್ಚು ಅವಧಿಗೆ ಅಮಾನತ್ತಿನಲ್ಲಿರುವವರೆಷ್ಟು?

ಆ) ಭಟ್ಕಳದ ಮಹಿಳಾ ವೈದ್ಯಾಧಿಕಾರಿಯನ್ನು ಅಮಾನತ್ತಿನಲ್ಲಿಟ್ಟ ಬಗ್ಗೆ ವಿಚಾರಣೆ ಮುಗಿದಿದೆಯೇ? ಅವರು ಅಮಾನತ್ತಿನಲ್ಲಿದ್ದಾಗ ಅವರ ಬದಲಿ ಕೆಲಸ ಮಾಡಿದವರು ಯಾರು?

ಇ) ಧಾರವಾಡದಲ್ಲಿ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ದಾದಿಯರ ತರಬೇತಿ ಕೇಂದ್ರ ಪ್ರಾಂಶುಪಾಲರನ್ನು ಎಷ್ಟು ದಿವಸಗಳಿಂದ ಅಮಾನತ್ತಿನಲ್ಲಿಡಲಾಗಿದೆ?

ಈ) ಇದರ ಬಗ್ಗೆ ವಿಚಾರಣೆ ನಡೆಸಿದ ಅಧಿಕಾರಿ ಹಾಗೂ ಅವರು ವರದಿ ಸಲ್ಲಿಸಿರುತ್ತಾರೆಯೇ?

ಉ) ವಿಚಾರಣೆಯಲ್ಲಿ ಪ್ರಾಂಶುಪಾಲರು ಅಪರಾಧಿ ಎಂದು ಕಂಡು ಬಂದಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಊ) ಧಾರವಾಡ ಜಿಲ್ಲಾ ಸರ್ಜನರ ಮೇಲೆ ಆರೋಪಗಳೇನಾದರೂ ಇವೆಯೇ?

ಶ್ರೀ ಬಿ. ರಾಜಯ್ಯ (ಆರೋಗ್ಯ ಮಂತ್ರಿಗಳು).—

ಅ) ೧೭ ಪತ್ರಾಂಕಿತ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ. ಈ ಪೈಕಿ ೧೦ ಪತ್ರಾಂಕಿತ ಅಧಿಕಾರಿಗಳು ೬ ತಿಂಗಳಿಗೂ ಹೆಚ್ಚು ಅಮಾನತ್ತಿನಲ್ಲಿಡಲಾಗಿದೆ.

ಆ) ಇಲ್ಲ. ಡಾ. ಆಸ್‌ಘರ್, ಪ್ರಾಥಮಿಕ ಆರೋಗ್ಯ ಘಟಕ, ಕೋರ್ನ ಇವರು ಬದಲಿ ಕೆಲಸ ಮಾಡಿದರು.

ಇ) ಒಂದು ವರ್ಷ ಎರಡು ತಿಂಗಳಿಂದ ಅಮಾನತ್ತಿನಲ್ಲಿಡಲಾಗಿದೆ.

ಈ) ೧) ವಿಭಾಗೀಯ ಜಂಟಿ ನಿರ್ದೇಶಕರು, ಬೆಳಗಾಂ ಅವರು ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸಿರುವರು.

೨) ಧಾರವಾಡ ಜಿಲ್ಲಾಧಿಕಾರಿ ಮತ್ತು ದಂಡಾಧಿಕಾರಿಯವರೂ ಸಹ ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸಿರುವರು.

ಉ) ವಿಭಾಗೀಯ ಜಂಟಿ ನಿರ್ದೇಶಕರು, ಬೆಳಗಾವಿ ಅವರು ಸಲ್ಲಿಸಿರುವ ವರದಿಯ ಪ್ರಕಾರ ಪ್ರಾಂಶುಪಾಲರು ಅಪರಾಧಿ ಎಂದು ಕಂಡು ಬಂದಿದೆ. ಆದುದರಿಂದ ವಿವರವಾದ ತನಿಖೆ ನಡೆಸಬೇಕಾಗಿದೆ

ಊ) ಒಂದು ದೂರು ದಿನಾಂಕ ೨೫-೪-೮೮ರಂದು ಸರ್ಕಾರಕ್ಕೆ ಬಂದಿದೆ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ಭಟ್ಕಳ ಸರ್ಕಾರಿ ಆಸ್ಪತ್ರೆಯಲ್ಲಿ ಮೂರು ವೈದ್ಯಾಧಿಕಾರಿಗಳ ಹುದ್ದೆಗಳಿದ್ದು ಅವರಲ್ಲಿ ಮಹಿಳಾ ವೈದ್ಯಾಧಿಕಾರಿಯನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟದ್ದು ಆರು ತಿಂಗಳಿಗಿಂತ ಮೇಲಾಯಿತು. ಹೀಗಾಗಿ ಅಲ್ಲಿ ಮಹಿಳಾ ವೈದ್ಯಾಧಿಕಾರಿಯಿಲ್ಲದೆ ಜನರಿಗೆ ಬಹಳ ಕಷ್ಟವಾಗಿದೆ. ಈ ವೈದ್ಯಾಧಿಕಾರಿಯ ಬಗ್ಗೆ ದೂರು ಏನಾದರೂ ಇದ್ದರೆ ವಿಚಾರಣೆ ಮಾಡಿ ಏನಾದರೂ ಕ್ರಮ ತೆಗೆದುಕೊಳ್ಳಿ, ಇದನ್ನು ಆರು ತಿಂಗಳಲ್ಲಿ ಮುಗಿಸಿ ಎಂದು ಪದೇ ಪದೇ ಕೇಳಿದ್ದಕ್ಕೆ ಈ ತನಕವೂ ಏನೂ ಆಗಿಲ್ಲ. ಅಲ್ಲಿ ಬಹಳ ಕಷ್ಟವಾಗಿದೆ. ಬೇರೆ ಯಾರೋ ಗಂಡಸು ಅಧಿಕಾರಿಯನ್ನು ಹಾಕಿಬಿಟ್ಟರೆ ಅವರು ಮಹಿಳಾ ವೈದ್ಯಾಧಿಕಾರಿಯ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ತಾವು ನನಗೆ ಹೇಳಬೇಕು. ಅವರ ವಿಚಾರಣೆಯನ್ನು ಬೇಗ ಮುಗಿಸುವುದಕ್ಕೆ ಆಗುತ್ತದೆಯೇ ಇಲ್ಲವೊ ? ಅವರಿಗೆ ಏನಾದರೂ ಶಿಕ್ಷೆ ಕೊಟ್ಟು ಬೇರೆ ಯಾರನ್ನಾದರೂ ತಂದು ಹಾಕುತ್ತೀರೋ ಹೇಗೆ ? ಅಲ್ಲಿದ್ದ ಇತರ ವೈದ್ಯಾಧಿಕಾರಿಯವರು ರಜೆ ಮೇಲೆ ಹೋಗಿದ್ದಾರೆ. ಹೀಗಾಗಿ ಅಲ್ಲಿ ಕೆಲಸ ಮಾಡುವವರೇ ಇಲ್ಲವಾಗಿದೆ. ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಿ ಎಂದು ಎಲ್ಲಾ ಮಂತ್ರಿಗಳಿಗೂ ಹೇಳಿದ್ದೇನೆ. ಆದರೆ ಯಾರೂ ಕೂಡ ಕಾಳಜಿ ತೆಗೆದುಕೊಳ್ಳುತ್ತಿಲ್ಲ. ಇದಕ್ಕೆ ಏನು ಪರಿಹಾರ ಕ್ರಮ ಕೈಗೊಳ್ಳುತ್ತೀರಿ ಎಂದು ನನಗೆ ಹೇಳಬೇಕು. ಇನ್ನೊಂದು, ಧಾರವಾಡ ಜಿಲ್ಲಾ ಸರ್ಜನ್ ಅವರ ಮೇಲೆ ೨೫-೬-೮೮ರಂದು ಆರೋಪ ಬಂದಿದೆಯೆಂದು ಹೇಳಿದಿರಿ, ಈ ಬಗ್ಗೆ ವಿಚಾರಣೆ ಕೈಗೊಂಡಿದ್ದೀರಾ ? ಅಲ್ಲಿ ಯಾರನ್ನಾದರೂ ನೇಮಿಸಿದ್ದೀರಾ ಹೇಗೆ ?

ಶ್ರೀ ಬಿ. ರಾಜಯ್ಯ.—ಹಿಂದೆ ನನಗೆ ಆರೋಪ ಬಂದಂಥ ಸಂದರ್ಭದಲ್ಲಿ ಅದನ್ನು ಸಿ. ಓ. ಡಿ.ಗೆ ರೆಫರ್ ಮಾಡಿದ್ದೆ. ಇತ್ತೀಚೆಗೆ ಅದರ ವರದಿ ಬರಲಿಲ್ಲ. ಈಗ ಜಿಲ್ಲಾ ಸರ್ಜನ್‌ರ ಮೇಲೆ ಆಪಾದನೆ ಇಲ್ಲವೆಂದು ವರದಿ ಬಂದಿದೆ. ಆದ್ದರಿಂದ ಈ ಮಹಿಳಾ ಪ್ರಿನ್ಸಿಪಾಲರು ಯಾರು ಇದ್ದರೋ ಅವರ ಮೇಲೆ

ಡೀಟೈಲ್ಡ್ ಎನ್‌ಕ್ವೈರಿ ಮಾಡಬೇಕಾಗಿ ಬಂದಿದೆ. ಆದಕ್ಕೋಸ್ಕರ ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದೇವೆ.

ಶ್ರೀ ಆರ್. ಎನ್. ನಾಯಕ್.--ಭಟ್ಕಳದ್ದು ಹೇಳಿ.

ಶ್ರೀ ಬಿ. ರಾಚಯ್ಯ.--ಅವಮಾನತ್ತಿನಲ್ಲಿ ಇಟ್ಟಂಥವರಿಗೆ ಆರು ತಿಂಗಳ ಒಳಗೆ ಅವರ ಎನ್‌ಕ್ವೈರಿಯನ್ನು ಪೂರೈಸಬೇಕಿತ್ತು. ಆದ್ದರಿಂದ ಸ್ವಲ್ಪ ಬೇಗ ಆದನ್ನು ಮಾಡಿಬಿಟ್ಟು ವರದಿಯನ್ನು ಕಳುಹಿಸಿಕೊಡಬೇಕೆಂದು ನಾನು ಆದೇಶ ಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್ --ಅಲ್ಲಿಯವರೆಗೆ ಆ ಆಸ್ಪತ್ರೆಯಲ್ಲಿ ಯಾರು ಕೆಲಸ ಮಾಡಬೇಕು ? ಅಲ್ಲಿ ಮುಸ್ಲಿಂ ಜನಸಂಖ್ಯೆ ಜಾಸ್ತಿ ಇದೆ. ಮುಸ್ಲಿಂ ಹೆಂಗಸರು ಗಂಡಸು ಡಾಕ್ಟರ್‌ರ ಹತ್ತಿರ ಹೋಗುವುದಕ್ಕೆ ಬೇಜಾರು ಪಟ್ಟುಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ ಆ ಮಹಿಳಾ ವೈದ್ಯಾಧಿಕಾರಿಯನ್ನು ನಿಮ್ಮ ಪಾರ್ಟಿಯವರು ಯಾರೋ ಪತ್ರ ಬರೆದಿದ್ದಕ್ಕೆ ಸಸ್ಪೆಂಡ್ ಮಾಡಿ ಈಗ ಎನ್‌ಕ್ವೈರಿ ಮಾಡಿಸುವುದಿಲ್ಲ ಎಂದರೆ ಹೇಗೆ ?

ಶ್ರೀ ಬಿ. ರಾಚಯ್ಯ.--ಆರೋಪ ಬಂದಂಥ ಕಾಲದಲ್ಲಿ ಅವರನ್ನು ಅಮಾನತ್ತಿನಲ್ಲಿಟ್ಟು ಎನ್‌ಕ್ವೈರಿ ಮಾಡುವುದಕ್ಕೆ ಆರ್ಡರ್ ಮಾಡಿದ್ದೇನೆ. ಆದ್ದರಿಂದ ಬೇರೆ ಇಂತಹ ಡಾಕ್ಟರ್ ಬೇಕು ಎಂದು ಹೇಳಿದರೆ ಅಲ್ಲಿಗೆ ಹಾಕಿಕೊಡಂತ್ತೇನೆ.

ಶ್ರೀ ಆರ್. ಎನ್. ನಾಯಕ --ನಾನು ಕೇಳಿದವರನ್ನು ನೀವು ಹಾಕಲೇ ಬಾರದು. ಕಾಂಗ್ರೆಸ್ಸಿನವರು ಸೂಚಿಸಿದವರನ್ನು ಬಿಟ್ಟು ಬೇರೆ ಯಾರನ್ನಾದರೂ ಹಾಕಿ. ಆದರೆ ಮಹಿಳಾ ವೈದ್ಯಾಧಿಕಾರಿಯನ್ನು ಅಲ್ಲಿ ನೇಮಿಸಬೇಕು. ನಿಮ್ಮ ಜಿಲ್ಲಾ ಪರಿಷತ್ತಿನ ಸದಸ್ಯರು ಒಬ್ಬರು ಅಪಾದನೆ ಮಾಡಿದ್ದಾರೆ ಎಂದು ಯಾರನ್ನೂ ಹೇಳದೆ ಕೇಳದೆ ಅವರನ್ನು ಸಸ್ಪೆಂಡ್ ಮಾಡಿದ್ದೀರಿ.

(ಪ್ರಶ್ನೆ. ೩೬೭ (೧೩೦೮) ಮುಂದುವರೆದುದು.)

ಅಲ್ಲಿ ಮುಸ್ಲಿಂ ಮಹಿಳೆಯರು ಪ್ರೈವೇಟ್ ಪ್ರಾಪ್‌ಗಳಿಗೆ ಹೋಗುತ್ತಿದ್ದಾರೆ. ಆದ್ದರಿಂದ ನಾಳೆಯೇ ಪೋಸ್ಟ್ ಮಾಡುತ್ತೇವೆಂದು ಹೇಳಿ. ಆರು ತಿಂಗಳಿಂದ ಅಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲ.

ಶ್ರೀ ಬಿ. ರಾಚಯ್ಯ.--ಅಲ್ಲಿಗೆ ಬೇರೆ ಮಹಿಳಾ ವೈದ್ಯಾಧಿಕಾರಿಗಳನ್ನು ಹಾಕಿದಾಗ ಅವರು ಹೋಗಿಲ್ಲ. ಮಹಿಳಾ ವೈದ್ಯಾಧಿಕಾರಿಗಳನ್ನು ಭರ್ತಿ ಮಾಡಬೇಕೆಂದು, ಅಲ್ಲಿಗೆ ಬೇರೆಯವರು ಕಳುಹಿಸಿದರೆ ಅಲ್ಲಿ ಹೋಗದವರೇ ಇಲ್ಲ. ಅದಕ್ಕೆ, ನಿಮಗೆ ಬೇಕಾದವರು ಯಾರಾದರೂ ಇದ್ದರೆ ಹೇಳಿ, ಅವರನ್ನೇ ಅಲ್ಲಿಗೆ ಹಾಕುತ್ತೇವೆ.

ಶ್ರೀ ಆರ್. ಎನ್. ನಾಯಕ್.--ಭಟ್ಕಳ್‌ನಲ್ಲಿ ಕೆಲಸ ಮಾಡಬೇಕಾದರೆ, ನಿಮ್ಮ ಪಾರ್ಟಿಯವರೇ ಆಗಬೇಕು. ಬೇರೆಯವರು ಯಾರೂ ಅಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.--ಯಾರು ಹೋಗುವುದಿಲ್ಲವೆಂದು ಹೇಳುತ್ತಾರೆ ಅವರನ್ನು ಸಸ್ಪೆಂಡ್ ಮಾಡಿ. ಇವರದು ಒಂದೇ ಕೇಸ್ ಅಲ್ಲ, ಬಹಳ ಕಡೆ ಇಂತಹ ಕೇಸುಗಳು ಬಂದಿವೆ. ಎಲ್ಲಿ ಯಾರು ಹೋಗುವುದಿಲ್ಲವೆಂದು ಹೇಳುತ್ತಾರೆ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಿ.

ಶ್ರೀ ಬಿ. ರಾಚಯ್ಯ.--ಈಗ ಯಾರನ್ನಾದರೂ ಅಲ್ಲಿಗೆ ಹಾಕುತ್ತೇನೆ. ಒಂದುವೇಳೆ ಅವರು ಹೋಗದೇ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.--ಮಹಿಳಾ ವೈದ್ಯಾಧಿಕಾರಿಗಳನ್ನು ಸಸ್ಪೆಂಡ್‌ನಲ್ಲಿ ಇಟ್ಟರೆ, ಅವರ ಜಾಗಕ್ಕೆ ಬೇರೆಯವರನ್ನು ಹಾಕುವ ಕೆಲಸ ಏಕೆ ಮಾಡಬಾರದು ?

ಶ್ರೀ ಬಿ. ರಾಚಯ್ಯ.--ಆರೋಪಣೆ ಮೇಲೆ ಎನ್‌ಕ್ವೈರಿ ಮಾಡುವುದು ಸ್ವಲ್ಪ ತಡವಾಗಿದೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಎನ್‌ಕ್ವೈರಿ ನಂತರವೂ ಅವರನ್ನು ಅಲ್ಲಿಗೆ ಹಾಕಲಾಗುವುದಿಲ್ಲ.

ಪ್ರಶ್ನೆ. ೩೬೮ (೧೩೦೯)

ಅಧ್ಯಕ್ಷರು.--ಮಾನ್ಯ ರಾಜಂಗಡರೇ, ನಿಮ್ಮ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ. ಈಗ ಮಾನ್ಯ ವೆಂಕಟರಾವಯ್ಯನವರೇ, ನಿಮ್ಮ ಪ್ರಶ್ನೆಯನ್ನು ಕೇಳಿ.